ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಹುದ್ದೆಯನ್ನು ತುಂಬುವುದರ ಬಗ್ಗೆ

220-ಶ್ರೀ ಪಿ.ಸಿ.ಸಿದ್ದನಗೌಡರ (ಕಲಘಟಗಿ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿಯಲ್ಲಿ ನಿರ್ದೇಶಕರ ಹುದ್ದೆಯು ತೆರವಾಗಿರುವುದು ನಿಜವೇ?*

ಆ) *ತೆರವಾಗಿದ್ದರೆ, ಅದನ್ನು ತುಂಬದಿರಲು ಕಾರಣವೇನು? ಹಾಗೂ ಅದನ್ನು ತುಂಬಲು ಎಷ್ಟು ಅವಧಿ ಬೇಕಾಗುವುದು*

ಇ) *ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿಯನ್ನು ಸ್ಥಾಪಿಸಿ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ನಿರ್ದೇಶಕರ ನೇಮಕ ಬಗ್ಗೆ ಏನೆಂದು ಉಲ್ಲೇಖಿತಲಾಗಿದೆ(ವಿವರ ಕೊಡುವುದು)*

ಈ) *ನಿರ್ದೇಶಕರನೇಮಕದ ಬಗ್ಗೆ ಆದೇಶದಲ್ಲಿ ಉಲ್ಲೇಖಿಸಿದಂತೆ ನಿಯಮವನ್ನು ಪಾಲಿಸಲಾಗಿದೆಯೇ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?*

ಉ) *ಜನರಲ್ ತಿಮ್ಮಯ ರಾಷ್ಟ್ರೀಯ ಸಾಹಸ ಅಕಾಡಮಿಯನ್ನು ಪ್ರಾರಂಭಿಸಿ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶದ ಪೂರ್ಣ ಪ್ರತಿಯನ್ನು ಒದಗಿಸಲಾಗುವುದೇ.*

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಸಚಿವರು)

ಅ) ಅಕಾಡೆಮಿಯಲ್ಲಿ, ಈವರೆಗೆ ನಿರ್ದೇಶಕರ ಹುದ್ದೆಯನ್ನು ನಿರ್ವಹಿಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯೊಬ್ಬರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಅಕಾಡೆಮಿಯ ಆಡಳಿತ ಮಂಡಳಿಯು ನಿರ್ದೇಶಕರ ಹುದ್ದೆಯನ್ನು ಸೃಜಿಸಲು ಪ್ರಸ್ತಾವನೆಯನ್ನು ಪರಿಶೀಲಿಸುತ್ತದೆ. ಹಾಗೂ ಸದರಿ ಹುದ್ದೆಯನ್ನು ನೇಮಕ ಮಾಡಲು ಕೂಡಲೇ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅಕಾಡೆಮಿಯಲ್ಲಿ ಒಬ್ಬರು ನಿರ್ದೇಶಕರು ಇರುತ್ತಾರೆಂದು ಸರ್ಕಾರಿ ಆದೇಶದಲ್ಲಿ ಷರತ್ತನ್ನು ವಿಧಿಸಲಾಗಿದೆ. ಮತ್ತು ಈ ಹುದ್ದೆ ಬೇರೆಯಾಗಿ ಸೃಜಿಸುವವರೆಗೆ ಜಂಟಿ ನಿರ್ದೇಶಕರು, ಯುವಜನ ಸೇವೆ ಇವರು ಅಕಾಡೆಮಿಯ ನಿರ್ದೇಶಕರಾಗಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ಲಗತ್ತಿಸಿದೆ.

PROCEEDINGS OF GOVERNMENT OF KARNATAKA

Sub : Establishment of the Gen. Thimayya National Academy of Adventure.

Read

1. G.O.No.ITY 3 EPE 88, dated 15-2-1988.
2. Letter dated 27.2.1988/17.3.1988 from National Adventure Foundation, Meerut-25001..
3. Government Letter No.ITY 20 EBB 88, dt.28.7.1988.